# ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಆಡಳಿತ ಸುಧಾರಣೆ)

ಕರ್ನಾಟಕ ಸರ್ಕಾರದ ಸಚಿವಾಲಯ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001

ದೂ: 080-2203 2907, 2203 2655 ಇ-ಮೇಲ್: dparar.rti.so@gmail.com ವೆಬ್‌ಸೈಟ್: https://dparar.karnataka.gov.in


ಸಂಖ್ಯೆ: ಸಿಆಸುಇ(ಆಸು) 47 ಆರ್‌ಟಿಐ 2023 ಇ-ಆಫೀಸ್ ನಂ: 1044042 ದಿನಾಂಕ: 28.11.2023

## ಅಧಿಸೂಚನೆ

**ವಿಷಯ: ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ 06 (ಆರು) (ಬೆಂಗಳೂರು 05 ಮತ್ತು ಬೆಳಗಾವಿ ಪೀಠ 01) ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳ ನೇಮಕಾತಿ ಬಗ್ಗೆ.**

ಮಾಹಿತಿ ಹಕ್ಕು ಅಧಿನಿಯಮ, 2005ರಡಿ ತನಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಲು ಮತ್ತು ನಿಗದಿಪಡಿಸಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಮಾಹಿತಿ ಆಯೋಗವನ್ನು ರಚಿಸಿದೆ. ಕರ್ನಾಟಕ ಮಾಹಿತಿ ಆಯೋಗದ ಈಗಿನ ಸಂರಚನೆಯನ್ನು www.kic.gov.in ಇಲ್ಲಿ ನೋಡಬಹುದಾಗಿದೆ. ಕರ್ನಾಟಕ ಮಾಹಿತಿ ಆಯೋಗದಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರ ಅಧಿಕಾರ ಮತ್ತು ಕರ್ತವ್ಯಗಳು ಮಾಹಿತಿ ಹಕ್ಕು ಅಧಿನಿಯಮ, 2005ರ ಅಧ್ಯಾಯ V ರನ್ವಯ ಇರುತ್ತದೆ.

ಮಾಹಿತಿ ಹಕ್ಕು ಕಾಯ್ದೆ 2005ರ ಅಧ್ಯಾಯ IV ರನ್ವಯ ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ನಿರ್ವಹಣೆ (ಮ್ಯಾನೇಜ್‌ಮೆಂಟ್), ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ಆಡಳಿತ (ಅಡ್ಮಿನಿಸ್ಟ್ರೇಷನ್ ಮತ್ತು ಗವರ್ನೆನ್ಸ್) ನಲ್ಲಿ ವಿಶಾಲ ತಿಳುವಳಿಕೆ ಮತ್ತು ಅನುಭವ ಹೊಂದಿರುವ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ಮಾಹಿತಿ ಆಯೋಗದಲ್ಲಿ ಪ್ರಸ್ತುತ ಒಟ್ಟು 06 (ಆರು) ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ.

**1) ಬೆಂಗಳೂರು – 05 (ಐದು), 2) ಬೆಳಗಾವಿ – 01 (ಒಂದು)**

ಈ ಹಿಂದೆ ಬೆಳಗಾವಿ ಪೀಠದ ರಾಜ್ಯ ಮಾಹಿತಿ ಆಯುಕ್ತರ ಹುದ್ದೆಯ ನೇಮಕಾತಿಗಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ(ಆಸು) 25 ಆರ್‌ಟಿಐ 2022 ದಿನಾಂಕ: 18.07.2022ರ ಜಾಹೀರಾತು ಪ್ರಕಟಣೆ ಹೊರಡಿಸಲಾಗಿದ್ದು, ಈ ಜಾಹೀರಾತು ಪ್ರಕಟಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮಾಹಿತಿ ಆಯುಕ್ತರು ಸಂಸತ್ ಸದಸ್ಯರಾಗಲೀ ಅಥವಾ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಮಂಡಲದ ಸದಸ್ಯರಾಗಿರತಕ್ಕದ್ದಲ್ಲ ಅಥವಾ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರ ವ್ಯವಹಾರವನ್ನಾಗಲೀ ಅಥವಾ ಯಾವುದೇ ವೃತ್ತಿಯನ್ನು ಮಾಡತಕ್ಕದ್ದಲ್ಲ.

ರಾಜ್ಯ ಮಾಹಿತಿ ಆಯುಕ್ತರ ಪದಾವಧಿ ಮತ್ತು ಸೇವಾ ಷರತ್ತುಗಳು ಮಾಹಿತಿ ಹಕ್ಕು (ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರ ಹಾಗೂ ಮಾಹಿತಿ ಆಯುಕ್ತರ, ರಾಜ್ಯ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ರಾಜ್ಯ ಮಾಹಿತಿ ಆಯುಕ್ತರುಗಳ ಪದಾವಧಿ, ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಹಾಗೂ ನಿಬಂಧನೆಗಳು) ನಿಯಮಗಳು, 2019 ಅನ್ನು ಒಳಗೊಂಡು ಮಾಹಿತಿ ಹಕ್ಕು ಅಧಿನಿಯಮ 2005ರ, ಪ್ರಕರಣ 16ರಡಿಯಲ್ಲಿ ಹಾಗೂ ಸದರಿ ಅಧಿನಿಯಮದ ಅಡಿಯಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಯಾವುದೇ ಅಧಿಸೂಚನೆಗಳು, ನಿಯಮಗಳು ಮತ್ತು ತಿದ್ದುಪಡಿಗಳ ಅಡಿಯಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು. **ಅಭ್ಯರ್ಥಿಗಳು ಕರ್ನಾಟಕದ ಯಾವುದೇ ಪೀಠದಲ್ಲಿ ಸೇವೆ ಸಲ್ಲಿಸುವುದಕ್ಕೆ ಸಿದ್ದರಿರಬೇಕು.** ಆಯ್ಕೆಗೊಂಡ ಅಭ್ಯರ್ಥಿಗಳು ಘನತೆವೆತ್ತ ರಾಜ್ಯಪಾಲರು ನಿಗದಿಪಡಿಸಿದ ದಿನಾಂಕದಂದು ಪ್ರಮಾಣವಚನ ಸ್ವೀಕರಿಸಲು ಸಿದ್ದರಿರಬೇಕು.

ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಕಾತಿ ಹೊಂದಲು ಮೇಲಿನ ಮಾನದಂಡಗಳನ್ನು ಪೂರೈಸಿರುವವರು ಮತ್ತು ನೇಮಕಗೊಳ್ಳಲು ಆಸಕ್ತರಾದವರು ತಮ್ಮ ವೈಯಕ್ತಿಕ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ನಮೂನೆಯಲ್ಲಿ ಅಂಚೆ ಮೂಲಕ / ಇ-ಮೇಲ್: dparar.rti.so@gmail.com ಅಥವಾ **ಖುದ್ದಾಗಿ ಕೊಠಡಿ ಸಂಖ್ಯೆ: 614, ಸ್ವೀಕೃತಿ ಮತ್ತು ರವಾನೆ ಶಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), 6ನೇ ಮಹಡಿ, 1ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿ ದಿನಾಂಕ: 30.12.2023ರ ಸಂಜೆ 5.30 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.**

ರಾಜ್ಯ/ಕೇಂದ್ರ ಸರ್ಕಾರದಲ್ಲಿ ಅಥವಾ ಯಾವುದೇ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ವಿವರಗಳನ್ನು ಸಮುಚಿತ ಮಾರ್ಗದ ಮೂಲಕ ಸಲ್ಲಿಸಬಹುದಾಗಿದೆ.

ಸಹಿ/- (ಜಾನಕಿ ವೈ.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಸು)
(ತರಬೇತಿ ಮತ್ತು ಮಾಹಿತಿ ಹಕ್ಕು)
ದೂ. ಸಂಖ್ಯೆ: 080-22032907, 22032655

---

**ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ 06 (ಆರು) (ಬೆಂಗಳೂರು – 05 ಮತ್ತು ಬೆಳಗಾವಿ ಪೀಠ – 01) ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳ ನೇಮಕಾತಿ ಬಗ್ಗೆ.**

### ಅರ್ಜಿ ನಮೂನೆ

1. ಹೆಸರು :
2. ಹುಟ್ಟಿದ ದಿನಾಂಕ :
3. ಲಿಂಗ (ಸ್ತ್ರೀ/ಪುರುಷ) :
4. ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರೇ :
5. ಅಂಚೆ ವಿಳಾಸ :
6. ಕನ್ನಡ ಭಾಷೆಯ ನೈಪುಣ್ಯತೆ (ಓದಲು, ಬರೆಯಲು ಮತ್ತು ಮಾತನಾಡಲು) :
7. ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆ :
8. ಇ-ಮೇಲ್ ವಿಳಾಸ :
9. ಶೈಕ್ಷಣಿಕ ಅರ್ಹತೆ :
10. ಪರಿಣಿತಿ ಹೊಂದಿರುವ ಕ್ಷೇತ್ರ :
11. ಪ್ರಸ್ತುತ ಉದ್ಯೋಗ :
12. ಸಾಧನೆಗಳು/ಉದ್ಯೋಗದ ಅನುಭವ (ಒಂದು ಪುಟಕ್ಕೆ ಮೀರದಂತೆ) :

ಸ್ವಯಂ ದೃಢೀಕರಿಸಿದ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸುವುದು.

ಸ್ಥಳ : ಅರ್ಜಿದಾರರ ಸಹಿ :

ದಿನಾಂಕ : ಅರ್ಜಿದಾರರ ಹೆಸರು :

DIPR/CP/BCPL/2333/2023-24

# DEPARTMENT OF PERSONNEL AND ADMINISTRATIVE REFORMS
(Administrative Reforms)
Karnataka Government Secretariat, 6th Floor, M.S. Building, Bengaluru-560001
Ph.: 080-2203 2907, 2203 2655 e-mail: dparar.rti.so@gmail.com website: https://dparar.karnataka.gov.in


**No: DPAR(AR)47 RTI 2023 E-No-1044042** **Date: 28-11-2023**

## NOTIFICATION

**Subject: Appointment of Six (06) Posts (Bengaluru - 05 and Belagavi Bench - 01) of State Information Commissioners in Karnataka Information Commission.**

The Government of Karnataka has constituted a body known as the Karnataka Information Commission to perform the functions assigned to it under the Right to Information Act, 2005. The present composition of the Karnataka Information Commission can be seen at **www.kic.gov.in** The powers and functions of the State Chief Information Commissioner and the State Information Commissioners in the Karnataka Information Commission are as per Chapter V of the Right to Information Act. 2005.

Chapter-IV of the. Right to Information Act 2005, provides that the State Information Commissioner shall be a person of eminence in public life with wide knowledge and experience in law, science and technology, social service. management. journalism. mass-media or administration and governance.

It is proposed to fill up Six (06) vacant posts of State Information Commissioners in the Karnataka Information Commission.

**1) Bengaluru - 05, 2) Belagavi - 01**

In this view earlier. Government Notification No: DPAR(AR) 25 RTI 2022 dated: 18.07.2022 issued for the post of State information Commissioner of Belagavi Bench is hereby withdrawn with immediate effect.

The Information Commissioner shall not be a Member of Parliament or Member of the Legislature of any State or Union Territory, as the case may be, or hold any other office of profit or connected with any political party or carrying on any business or pursuing any profession.

The terms of office and conditions of service of the State Information Commissioner shall be as provided under section 16 of the Right to Information Act, 2005 read along with the Right to Information (Terms of office, Salaries, Allowances and other Terms and Conditions of Service of Chief Information Commissioner and Information Commissioners in the Central Information Commission, State Chief Information Commissioner and State Information Commissioners in the State Information Commission) Rules, 2019, and any notifications, rules and amendments issued under the said Act from time to time. **Applicants should be willing to serve any Bench in Karnataka.** Selected Candidates should be ready to take oath on the date fixed by Hon'ble Governor.

Persons fulfilling the criteria for appointment as State Information Commissioner and interested in appointment to the post may send their Application with bio-data in the proforma enclosed with this notification by post/ e-mail: **dparar.rti.so@gmail.com** or hand delivery to **Room No. 614 , Receipts and Inward Section, Department of Personnel and Administrative Reforms (Administrative Reforms), 6th Floor, 1st gate, M.S. Building, Dr. B.R. Ambedkar Veedhi, Bengaluru-560 001 before : 30.12.2023 by 5.30 PM.**

Persons who are serving under the State/Central Government or any other organization. may send their particulars through proper channel.

**Sd/- (JANAKI Y.R.)**
Under Secretary to Government
Department of Personnel and
Administrative Reforms (AR)
(Training & RTI)
Ph.No.: 080-22032907, 22032655

---

**Appointment of Six (06) Posts (Bengaluru - 05 and Belagavi Bench - 01) of State Information Commissioners in the Karnataka Information Commission.**

**Application Form**

Affix self-attested recent passport size photograph

1. **Name** :
2. **Date of Birth** :
3. **Sex (Male / Female)** :
4. **Whether belongs to SC/ST** :
5. **Present Address** :
6. **Whether conversant in Kannada language (read. write and speak)** :
7. **Telephone No. / Mobile No.** :
8. **E-mail Address** :
9. **Educational Qualification** :
10. **Area of Eminence** :
11. **Present Occupation** :
12. **Achievements/Work done experience (in not more than one page)** :

**Date :** **Applicant Signature:**
**Place :** **Applicant Name:**

DIPR/CP/BCPL/2333/2023-24